ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ವಿ ಟಿ ಯು ಅಧಿನಿಯಮ ೧೯೯೪" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)
**Visvesvaraya Technological University**
(State University of Government of Karnataka Established as per the VTU Act, 1994)

**ಪ್ರೋ. ಬಿ. ಈ. ರಂಗಸ್ವಾಮಿ ಪಿಹೆಚ್.ಡಿ.**
**ಕುಲಸಚಿವರು**

ದೂರವಾಣಿ ಸಂ: (0831) – 2498100
ಫ್ಯಾಕ್ಸ್ ಸಂ : (0831) – 2405467

**ಉಲ್ಲೇಖ ಸಂ. : ವಿತಾವಿ/ಪಿಎಸ್/2022-23/** 5792 **ದಿನಾಂಕ:** -6 JAN 2023

## ಸುತ್ತೋಲೆ

ವಿಷಯ: ವಿ.ತಾ.ವಿ. ಯ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ವಿ.ತಾ.ವಿ.ಯ ಅಧೀನದಲ್ಲಿ ಬರುವ ಎಲ್ಲ ಸಂಶೋಧನಾ ಕೇಂದ್ರಗಳಲ್ಲಿ (Research Centres of VTU) Ph.D. ಮತ್ತು M.S. (Engg.) ಮಾಡುತ್ತಿರುವ ಅಭ್ಯರ್ಥಿಗಳು ದಿನಾಂಕ 13.01.2023 ರಂದು ಏರ್ಪಡಿಸಲಾದ ಆನ್‌ಲೈನ ಸಭೆಗೆ ಹಾಜರಾಗುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ವಿ.ತಾ.ವಿ.ಯ ಅಧೀನದಲ್ಲಿ ಬರುವ ಎಲ್ಲ ಸಂಶೋಧನಾ ಕೇಂದ್ರಗಳಲ್ಲಿ (Research Centres of VTU) Ph.D. ಮತ್ತು M.S.(Engg.) ಮಾಡುತ್ತಿರುವ (Full Time and Part Time) ಅಭ್ಯರ್ಥಿಗಳೊಂದಿಗೆ ವಿ.ತಾ.ವಿ. ಮಾನ್ಯ ಕುಲಪತಿಗಳಾದ ಪ್ರೋ. ವಿದ್ಯಾಶಂಕರ ಎಸ್. ಅವರು Ph.D./M.S.(Engg) ಗಳಿಗೆ ಸಂಬಂಧಿಸಿದ ವಿಷಯಗಳ ಕುರಿತು ಸಭೆ ಹಾಗೂ ಸಂವಾದವನ್ನು ಆನ್‌ಲೈನ್ ಮುಖಾಂತರ ಶುಕ್ರವಾರ ದಿನಾಂಕ 13.01.2023 ರಂದು ಮಧ್ಯಾಹ್ನ 2.30 ಕ್ಕೆ ಏರ್ಪಡಿಸಲಾಗಿರುತ್ತದೆ.

ಈ ಕುರಿತಂತೆ, ಎಲ್ಲ ಮಹಾವಿದ್ಯಾಲಯದ ಪ್ರಾಚಾರ್ಯರಿಗೆ, ವಿ.ತಾ.ವಿ.ಯ ಎಲ್ಲ ಪ್ರಾದೇಶಿಕ ನಿರ್ದೇಶಕರು ಹಾಗೂ ವಿ.ತಾ.ವಿ.ಯ ಎಲ್ಲ ವಿಭಾಗಗಳ ಚೇರ್‌ಪರಸನ್ಸ್ ತಿಳಿಸುವುದೇನೆಂದರೆ, ತಮ್ಮ ಮಹಾವಿದ್ಯಾಲಯದ ಎಲ್ಲ ಸಂಶೋಧನಾ ಕೇಂದ್ರಗಳಲ್ಲಿ Ph.D. ಮತ್ತು M.S.(Engg) ಗಳಿಗೆ Full Time and Part Time ಆಗಿ ನೊಂದಣಿಮಾಡಿಕೊಂಡು ಪ್ರಸ್ತುತ ಸಂಶೋಧನೆ ಮಾಡುತ್ತಿರುವ ಎಲ್ಲ ಸಂಶೋಧನಾ ಅಭ್ಯರ್ಥಿಗಳಿಗೆ (Research Scholars) ಆನ್‌ಲೈನ್ ಮುಖಾಂತರ ಏರ್ಪಡಿಸಲಾದ ಈ ಸಭೆ ಹಾಗೂ ಸಂವಾದಕ್ಕೆ ಕಡ್ಡಾಯವಾಗಿ ಹಾಜರಾಗಲು ತಿಳಿಸಬೇಕು ಮತ್ತು ದಿನಾಂಕ 13.01.2023 ರಂದು ಆ ಎಲ್ಲ ಸಂಶೋಧನಾ ಅಭ್ಯರ್ಥಿಗಳನ್ನು ಮಹಾವಿದ್ಯಾಲಯಕ್ಕೆ ಕರೆಯಿಸಿಕೊಂಡು ಮಹಾವಿದ್ಯಾಲಯದ ಸೂಕ್ತ ಸ್ಥಳದಲ್ಲಿ ಆಸನದ ವ್ಯವಸ್ಥೆ ಮಾಡಿ ಅಲ್ಲಿಂದಲೇ ಈ ಆನ್‌ಲೈನ್ ಸಭೆ ಹಾಗೂ ಸಂವಾದದಲ್ಲಿ ಎಲ್ಲ ಸಂಶೋಧನಾ ಅಭ್ಯರ್ಥಿಗಳು (Research Scholars) ಪಾಲ್ಗೊಳ್ಳುವಂತೆ ವ್ಯವಸ್ಥೆಯನ್ನು ಮಾಡಿಕೊಳ್ಳಲು ಈ ಮೂಲಕ ಸೂಚಿಸಲಾಗಿದೆ.

ಮುಂದುವರೆದು, ಸಭೆಯ ನಂತರ ಸಂವಾದ ನಡೆಯಲ್ಲಿದ್ದು ಸಂಶೋಧನಾ ಅಭ್ಯರ್ಥಿಗಳು ತಮ್ಮ ಕುಂದುಕೊರತೆಗಳನ್ನು/ ಪ್ರಶ್ನೆಗಳನ್ನು/ಸಲಹೆಗಳನ್ನು ನೀಡಬಹುದಾಗಿದೆ. ಆದ್ದರಿಂದ ಸಭೆ ಹಾಗೂ ಸಂವಾದ ನಡೆಯವಾಗ ಯಾವುದೇ ರೀತಿಯಿಂದಲೂ ಇಂಟರನೆಟ್ ಕನೆಕ್ಷನ್/ವಿಡಿಯೋ/ಆಡಿಯೋಗಳಿಗೆ ಸಂಬಂಧಿಸಿದ ಯಾವುದೇ ಅಡೆತಡೆ ಉಂಟಾಗದಂತೆ ಸುಸಜ್ಜಿತ ಇಂಟರನೆಟ್ ಹಾಗೂ ವಿಡಿಯೋ ವ್ಯವಸ್ಥೆಯನ್ನ ಮಾಡಿಕೊಳ್ಳಬೇಕು. ಆನ್‌ಲೈನ್ ಲಿಂಕನ್ನು ಸಭೆಯ ದಿನದಂದು ಕಳುಹಿಸಿಕೊಡಲಾಗುವುದು ಹಾಗೂ ಈ ಲಿಂಕನ್ನು ವೈಯಕ್ತಿಕವಾಗಿ ಯಾವ ಸಂಶೋಧನಾ ಅಭ್ಯರ್ಥಿಗಳೊಂದಿಗೂ ಹಂಚಿಕೊಳ್ಳಬಾರದು ಮತ್ತು ಸಂಸ್ಥೆ/ಮಹಾವಿದ್ಯಾಲಯ ಹೆಸರಿನಲ್ಲಿಯೇ ಒಂದೇ ಲಾಗಿನ್ ಮುಖಾಂತರ ಸಭೆಗೆ ಹಾಜರಾಗಬೇಕು.

**ಸೂಚನೆ: ಸಂವಾದ ನಡೆಯುವ ಸಂದರ್ಭದಲ್ಲಿ ಒಂದು ಮಹಾವಿದ್ಯಾಲಯದಿಂದ ಒಬ್ಬ ಅಭ್ಯರ್ಥಿ ಮಾತನಾಡುವುದು ಸೂಕ್ತವಾಗಿದ್ದು, ಆ ದಿನ ಆ ಸಭೆಗೆ ಹಾಜರಾಗುವ ಎಲ್ಲ ಸಂಶೋಧನಾ ಅಭ್ಯರ್ಥಿಗಳೊಂದಿಗೆ (Research Scholars) ಒಂದು ಪೂರ್ವಭಾವಿ ಸಭೆಯನ್ನು ನಡೆಸಿ ಪ್ರಶ್ನೆ ಹಾಗೂ ಸಲಹೆಗಳನ್ನು ಪಟ್ಟಿ ಮಾಡಿ ಸಂಶೋಧನಾ ಅಭ್ಯರ್ಥಿಗಳಲ್ಲಿಯೇ (Research Scholars) ಒಬ್ಬರನ್ನು ನೇಮಿಸಿ ಮಾತನಾಡುವಂತೆ ವ್ಯವಸ್ಥೆಮಾಡಿಕೊಳ್ಳಬೇಕು ಮತ್ತು ಪ್ರಶ್ನೆ ಹಾಗೂ ಸಲಹೆಗಳು ಪುನರಾವರ್ತನೆ(Repeat) ಆಗದಂತೆ ಎಚ್ಚರಿಕೆ ವಹಿಸಬೇಕು.**

ಆದೇಶದ ಮೇರೆಗೆ,
Ray 06/01/2023 BE
ಕುಲಸಚಿವರು

....ಮು.ತಿ.ನೋ.

ಇವರಿಗೆ,

೧) ಪ್ರಾಚಾರ್ಯರು, ವಿ.ತಾ.ವಿ.ಯ ಎಲ್ಲ ಸಂಯೋಜನೆಹೊಂದಿದ, ಘಟಕ ಹಾಗೂ ಸ್ವಾಯತ್ತ ತಾಂತ್ರಿಕ ಮಹಾವಿದ್ಯಾಲಯಗಳು ಹಾಗೂ ಸ್ಕೂಲ್ ಆಫ್ ಆರ್ಕಿಟೆಕ್ಚರ್.
೨) ಪ್ರಾದೇಶಿಕ ನಿರ್ದೇಶಕರು (ಪ್ರಭಾರಿ), ವಿ.ತಾ.ವಿ.ಯ ಬೆಂಗಳೂರು, ಬೆಳಗಾವಿ, ಕಲಬುರಗಿ ಹಾಗೂ ಮೈಸೂರು ಪ್ರಾದೇಶಿಕ ಕೇಂದ್ರಗಳು.
೩) ಎಲ್ಲ ವಿಭಾಗಗಳ ಚೇರ್‌ಪರಸನ್/ಪ್ರೋಗ್ರಾಮ್ ಕೋರ್ಡಿನೇಟರ್ ಸ್ನಾತಕೋತ್ತರ ಕೇಂದ್ರ, ವಿ.ತಾ.ವಿ, ಮುದ್ದೇನಹಳ್ಳಿ, ಬೆಳಗಾವಿ, ಕಲಬುರ್ಗಿ ಮತ್ತು ಮೈಸೂರು.
೪) ಮುಖ್ಯಸ್ಥರು, ವಿತಾವಿ ಸಂಯೋಜನೆಹೊಂದಿದ ಸಂಶೋಧನಾ ಕೇಂದ್ರಗಳು (ಅಧೀನ ಮಹಾವಿದ್ಯಾಲಯಗಳ ಹೊರತು ಪಡಿಸಿ)
೫) ನಿರ್ದೇಶಕರು, R & D, ವಿ.ತಾ.ವಿ. ಬೆಳಗಾವಿ ಇವರ ಮಾಹಿತಿಗಾಗಿ ಹಾಗೂ ಸಭೆ ಹಾಗೂ ಸಂವಾದದ ವ್ಯವಸ್ಥೆಯನ್ನು ಮಾಡಿಕೊಳ್ಳಲು

ಪ್ರತಿ ಇವರಿಗೆ,

೧) ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ, ಇವರಿಗೆ, ಅವರ ಕಾರ್ಯದರ್ಶಿಗಳ ಮುಖಾಂತರ.
೨) ಕುಲಸಚಿವರು(ಮೌಲ್ಯಮಾಪನ), ವಿ.ತಾ.ವಿ., ಬೆಳಗಾವಿ ಇವರ ಮಾಹಿತಿಗಾಗಿ ಹಾಗೂ ಸಭೆಗೆ ಹಾಜರಾಗಲು
೩) ಹಣಕಾಸು ಅಧಿಕಾರಿಗಳು, ವಿ.ತಾ.ವಿ., ಬೆಳಗಾವಿ ಇವರ ಮಾಹಿತಿಗಾಗಿ ಹಾಗೂ ಸಭೆಗೆ ಹಾಜರಾಗಲು
೪) ವಿಶೇಷಾಧಿಕಾರಿಗಳು, (VTU RRC, ಪಿ.ಹೆಚ.ಡಿ ಅಕ್ಯಾಡೆಮಿಕ್ ಹಾಗೂ ಪರಿಕ್ಷಾಂಗ) ವಿಭಾಗಗಳು, ವಿ.ತಾ.ವಿ., ಬೆಳಗಾವಿ.
೫) ವಿಶೇಷಾಧಿಕಾರಿಗಳು (ಎಸ್.ಒ–೧ & ೨), ಶೈಕ್ಷಣಿಕ ವಿಭಾಗ, ವಿ.ತಾ.ವಿ., ಬೆಳಗಾವಿ
೬) ನಿರ್ದೇಶಕರು, ITISMU, ವಿ.ತಾ.ವಿ., ಬೆಳಗಾವಿ ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.